ಶ್ರೀ ಎಸ್. ಗೋಪಾಲಗೌಡ.—ಕೆರೆಗಳು ಇನ್ನೂ ಜೀರ್ಣೋದ್ಧಾರವಾಗದಿರುವುದಕ್ಕೆ ಕಾರಣವೇನು ?

ಶ್ರೀ ಕಡಿದಾಳ್ ಮಂಜಪ್ಪ.—ನಾನಾ ಕಾರಣಗಳಿವೆ. ಕೆಲವು ಕಾರಣ ಜೀರ್ಣೋದ್ಧಾರಮಾಡುವುದಕ್ಕೆ ಲಾಭದಾಯಕವಾಗಿಲ್ಲದಿರುವುದು, ಕೆಲವು ಪ್ರೈವೇಟ್ ಕೆರೆಗಳಾಗಿರುವುದು.

ಶ್ರೀ ಎಸ್. ಗೋಪಾಲಗೌಡ.—ಲಾಭದಾಯಕವಾಗಿಲ್ಲವೆಂದು ಹೇಳುವುದು ನೀರಿರುವುದಿಲ್ಲವೆಂಬ ದೃಷ್ಟಿಯಿಂದರೇ ಅಥವಾ ಕೆರೆಕೆಳಗೆ ಸಾಕಷ್ಟು ಜಮೀನಿಲ್ಲವೆಂಬ ದೃಷ್ಟಿಯಿಂದರೆ ?

ಶ್ರೀ ಕಡಿದಾಳ್ ಮಂಜಪ್ಪ.—ಜಮೀನಿರುವುದು ಕಡಮೆ, ಖರ್ಚು ಜಾಸ್ತಿ, ಉದಾಹರಣೆಗೆ ಗುಡಿಬಂಡೆ ತಾಲ್ಲೂಕಿನಲ್ಲಿ ತೋರಿಸಿರುವ ಎರಡನೆಯ ಕೆರೆ. ಒಂದನೆಯ ಕೆರೆ ಪ್ರೈವೇಟ್ ಕೆರೆ ; ಎರಡನೆಯ ಕೆರೆಕೆಳಗೆ ಐದು ಎಕರೆ ಅಚ್ಚುಕಟ್ಟು ಮಾತ್ರ ಇದೆ ; ಅದನ್ನು ದುರಸ್ತುಮಾಡಲು ಹಣ ಜಾಸ್ತಿ ಖರ್ಚಾಗುತ್ತದೆ.

ಶ್ರೀ ಎಸ್. ಗೋಪಾಲಗೌಡ.—ಗೂಳೂರು ಹೋಬಳಿಯಲ್ಲಿ ಯೆಂಚರುಪುಪಲ್ಲ ಕೆರೆ ದುರಸ್ತುಮಾಡಿದೆಯೆ ?

ಶ್ರೀ ಕಡಿದಾಳ್ ಮಂಜಪ್ಪ.—ಅದು ಗೊತ್ತಿಲ್ಲ.

ಶ್ರೀ ಎಸ್. ಗೋಪಾಲಗೌಡ.—ಅದು ಬ್ರೀಚ್ ಆಗಿರುವುದು ಯಾವ ಕಾರಣದಿಂದ ?

ಶ್ರೀ ಕಡಿದಾಳ್ ಮಂಜಪ್ಪ.—ಉತ್ತರದಲ್ಲಿ ನಮೂದಿಸಿರುವ ಕೆರೆಗಳಿಗೆ ಮಾತ್ರ ಈಗ ವಿವರ ಕೊಡಬಹುದು.

Well subsidy to each District.

Q.—110. Sri H. S. RUDRAPPA (Honnalli).—

Will the Government be pleased to state :—

(*a*) the amount of well subsidy given to each district during the years 1952-53, 1953-54 for lift irrigation purpose ;

(*b*) the number of persons who applied for well subsidy in Shimoga District during 1952-53 and 1953-54 ;

(*c*) the number of persons who have been given help in this connection?

A.—Sri KADIDAL MANJAPPA (Minister for Revenue and Public Works.—

(*a*)

	1952-53. Rs.	*1953-54.* Rs.
1. Bangalore ...	30,000	30,000
2. Kolar ...	3,20,500	1,00,000
3. Tumkur ...	60,000	57,000
4. Chitaldrug ...	50,000	57,500
5. Shimoga ...	25,000	25,000
6. Chickmagalur.	25,000	25,000
7. Hassan ...	25,000	25,000
8. Mysore ...	30,000	3,000
9. Mandya ...	25,000	25,000
Total ...	5,90,500	3,47,500

(*b*)

1952-53	*1953-54*
166	21

(*c*) The question is not clear as to the nature of help referred to therein.

ಶ್ರೀ ಎಚ್. ಎಸ್. ರುದ್ರಪ್ಪ.—ಶಿವಮೊಗ್ಗಿ ಡಿಸ್ಟ್ರಿಕ್ಟಿಗೆ ಕೊಟ್ಟಿರುವ ಹಣ ಸಾಲದೆಂದು ಡೆಪ್ಯುಟಿ ಕಮಿಷನರು ಸರ್ಕಾರಕ್ಕೆ ಬರೆದಿದ್ದಾರಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ಸರ್ಕಾರಕ್ಕೆ ಬರೆದಿಲ್ಲ; ಬಹುಶಃ ರೆವೆನ್ಯೂ ಕಮಿಷನರಿಗೆ ಬರೆದಿರಬಹುದು.

ಶ್ರೀ ಎಚ್. ಎಸ್. ರುದ್ರಪ್ಪ.—1952-53 ನೆಯ ಸಾಲಿಗಿಂತ 1953-54ನೆಯ ಸಾಲಿನಲ್ಲಿ ಅರ್ಜಿಗಳು ಕಡಮೆ ಸಂಖ್ಯೆಯಲ್ಲಿ ಬಂದಿರುವುದಕ್ಕೆ ಕಾರಣವೇ ನೆಂಬುದನ್ನು ತನಿಖೆ ಮಾಡಿದ್ದೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಡಿಮ್ಯಾಂಡ್ ಕಡಮೆಯೆಂದು ಅರ್ಥಬಾಗುತ್ತದೆ.

ಶ್ರೀ ಎಚ್. ಎಸ್. ರುದ್ರಪ್ಪ.—1952-53 ನೆಯ ಸಾಲಿನಲ್ಲಿ ಬಂದಿರುವ 166 ಅರ್ಜಿಗಳ ಪೈಕಿ ಎಷ್ಟಕ್ಕೆ ಸಬ್ಸಿಡಿ ಕೊಡಲಾಗಿದೆ ?

ಶ್ರೀ ಕಡಿದಾಳ್ ಮಂಜಪ್ಪ.—ವಿವರ ಇನ್ನೂ ಬಂದಿಲ್ಲ.

ಶ್ರೀ ಎಚ್. ಎಸ್. ರುದ್ರಪ್ಪ.—ಸರಿಯಾದ ಪ್ರೋತ್ಸಾಹವಿಲ್ಲದೆ ಅರ್ಜಿ ಹಾಕವುದನ್ನೇ ಬಿಟ್ಟಿದ್ದಾರೆ, ಬಾವಿ ತೆಗೆಯುವುದನ್ನೇ ಬಿಟ್ಟಿದ್ದಾರೆ ಎಂಬುದು ಅರ್ಜಿಗಳ ಸಂಖ್ಯೆಯಿಂದ ಸರ್ಕಾರಕ್ಕೆ ತಿಳಿದು ಬಂದಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಇಲ್ಲ.

ಶ್ರೀ ಎಚ್. ಎಸ್. ರುದ್ರಪ್ಪ.—ತಾವು ಅಲಾಟ್ ಮಾಡಿರುವ ಹಣ ಪೂರ್ತಿಯಾಗಿ ಖರ್ಚಾಗಿದೆಯೆ, ಇಲ್ಲವೆ ಎಂಬುದನ್ನು ತಾವೇನಾದರೂ ತನಿಖೆ ಮಾಡುತ್ತೀರಾ ಅಥವಾ ಆ ಬಗ್ಗೆ ವರದಿ ತರಿಸುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ವರದಿ ತರಿಸುತ್ತೇವೆ.

Sri M. RAJASEKHARA MURTHY.—What are the principles that Government bear in mlnd at thc time of allotting to various districts ?

Sri KADIDAL MANJAPPA.—Geographical condition and the demand etc.

Sri M. RAJASEKHARA MURTHY.—Is it not the practice of the Government to ailot more money to districts which have no channel irrigation ?

Sri KADIDAL MANJAPPA.—Not only those places which have no chnnnel irrigation but those places where there is scarcity of rain.

Sri M. RAJASEKHARA MURTHY.—How is it that you have sanctioned 25,000 to Mandya and 3,000 to Mysore which is bigger than Mandya ?

Sri KADIDAL MANJAPPA.—There are very few applications I am told. These amounts are not allotted by Government. They are allotted by the Revenue Commissioner and other officers according to the need and in

accordance with the report received by the Deputy Commissioners.

Sri M. RAJASEKHARA MURTHY.--Is not the Revenue Commissioner a Government servant ?

Sri KADIDAL MANJAPPA.—Quite so. The question was ' you'.

Mr. SPEAKER.—He means Government.

Sri M. RAJASEKHARA MURTHY.-Is it not a fact that you have given instructions to revenue authorities not to recommend any cases for well subsidy ?

Sri KADIDAL MANJAPPA.—No.

ಶ್ರೀ ಎಚ್. ಕೆ. ಶಿವರುದ್ರಪ್ಪ.—ಮೈಸೂರು ಜಿಲ್ಲೆಯಿಂದ ಬಾವಿಗಳನ್ನು ತೋಡಿಸಲು ಸಬ್ಸಿಡಿಗಾಗಿ ಬಂದಿರುವ ಅರ್ಜಿಗಳೆಷ್ಟು ?

ಶ್ರೀ ಕಡಿದಾಳ್ ಮಂಜಪ್ಪ.—ನೋಟೀಸ್.

ಶ್ರೀ ಎಚ್. ಕೆ. ಶಿವರುದ್ರಪ್ಪ.—ಕೆಲವು ಕಡೆಗಳಲ್ಲಿ ಬಾವಿಗಳಿಗೆ ಹಣಬೇಕೆಂದು ಕೇಳಿದವರಿಗೆ ಹಣವಿಲ್ಲವೆಂದು ಹೇಳಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಶ್ರೀ ಕಡಿದಾಳ್ ಮಂಜಪ್ಪ.—ಬಂದಿಲ್ಲ.

ಶ್ರೀ ಎಚ್. ಕೆ. ಶಿವರುದ್ರಪ್ಪ.—ಅನೇಕ ಅರ್ಜಿ ಬಂದಾಗ್ಯೂ ತೃಪ್ತಿಯಾಗದೆ ಸಬ್ಸಿಡಿ ಕೊಡದಿರುವುದು ಗೊತ್ತೆ ?

Sri KADIDAL MANJAPPA.—I have no information. I have called for information.

Sri S. SRINIVASA IYENGAR.—Is it not a fact that T.-Narsipur taluk has a special facility for lift irrigation ?

Sri KADIDAL MANJAPPA.—There are a number of channels in that taluk and my friend has no room for complaining.

Sri S. SRINIVASA IYENGAR.—I am not complaining. I am asking you whether it is not a fact that there are opportunities for having this lift irrigation system in T.-Narsipur taluk ?

Sri KADIDAL MANJAPPA.—There are some opportunities.

Sri S. SRINIVASA IYENGAR.—Will the Government undertake measures just to popularise this lift irrigation where channels do not run ?

Sri KADIDAL MANJAPPA.—It decends upon the availability of funds.

Sri S. SRINIVASA IYENGAR.—Will the Government take up this question and get it investigated whether they could undertake this in places where channels do not run ?

Sri KADIDAL MANJAPPA.—We have no objection to make attempts to popularise, but the fact is, in some places people are not anxious to have irrigation wells because we are giving only Rs. 250 which is not sufficient.

Sri S. SRINIVASA IYENGAR.—When people do come forward, will the Government accommodate them ?

Sri KADIDAL MANJAPPA.—We will consider.

ಶ್ರೀ ಯು. ಎಂ. ಮಾದಪ್ಪ.—ಚಾಮರಾಜನಗರ ತಾಲ್ಲೂಕಿನಲ್ಲಿ ಸಬ್ಸಿಡಿ ಕೊಟ್ಟಿರುವುದನ್ನು ಪಾಪಸು ತೆಗೆದುಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಇಲ್ಲ.

ಶ್ರೀ ಯು. ಎಂ. ಮಾದಪ್ಪ.—ಅಂಥ ಕೇಸಸ್ ಇದ್ದರೆ ಸ್ಥಳೀಯ ಅಧಿಕಾರಿಗಳಿಗೆ ಇನ್ಸ್ಟ್ರಕ್ಷನ್ ಕೊಟ್ಟು ಮತ್ತೆ ಕೊಡುವುದಕ್ಕೆ ಏರ್ಪಾಡು ಮಾಡುತ್ತೀರಾ ?

Sri KADIDAL MANJAPPA.—I will examine.

ಶ್ರೀ ಟಿ. ಎಸ್. ಮೂಡಲಗಿರಿ ಗೌಡ.—ಹಣವಿಲ್ಲವೆಂದು ರಿಜೆಕ್ಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಕೆಲವು ತಾಲ್ಲೂಕುಗಳಲ್ಲಿ ಆ ರೀತಿ ಆಗಿರುವುದು ಗಮನಕ್ಕೆ ಬಂದಿದೆ.

ಶ್ರೀ ಟಿ. ಎಸ್. ಮೂಡಲಗಿರಿ ಗೌಡ.—ಆದ್ದರಿಂದ ರಿಜೆಕ್ಟೆಡ್ ಅಪ್ಲಿಕೇಷನ್‌ಗಳ ಆಧಾರದ ಮೇಲೆ ಡಿಮ್ಯಾಂಡ್ ಕಂಡು ಹಿಡಿಯುವುದಕ್ಕೆ ಸಾಧ್ಯವಿಲ್ಲವೇ ?

Sri KADIDAL MANJAPPA.—There is a lot of demand for subsidy and the number of applications were considerably large.

ಶ್ರೀ ಟಿ. ಎಸ್. ಮೂಡಲಗಿರಿ ಗೌಡ.—ಡಿಮ್ಯಾಂಡನ್ನನುಸರಿಸಿ ಹಣವನ್ನು ಗೊತ್ತುಮಾಡಲಾಗಿದೆ ಎಂದು ಹೇಳಿದಿರಿ. ಹಾಗಾದರೆ 3,47,500 ರೂಪಾಯಿಗಳ ಡಿಮ್ಯಾಂಡನ್ನು ನಿಗದಿ ಮಾಡುವಾಗ ಅನುಸರಿಸಿರುವ ನೀತಿಯೇನು ?

Sri KADIDAL MANJAPPA.—On the applications received the demand can be guaged.

ಶ್ರೀ ಟಿ. ಎಸ್. ಮೂಡಲಗಿರಿ ಗೌಡ.—ಹಾಗಾದರೆ ತುಮಕೂರು, ಚಿತ್ರದುರ್ಗ ಜಿಲ್ಲೆಗಳು ಡಿಸ್ಟ್ರೆಸ್ ಏರಿಯಾ ಅಲ್ಲವೆ ?

ಶ್ರೀ ಕಡಿದಾಳ್ ಮಂಜಪ್ಪ.—ಹೌದು ; ಅಲ್ಲಗೂ ಕೊಟ್ಟಿದೆ.

ಶ್ರೀ ಟಿ. ಎಸ್. ಮೂಡಲಗಿರಿ ಗೌಡ.—ಸ್ಪೆಷಲ್ಲಾಗಿ ಕೋಲಾರ ಜಿಲ್ಲೆಗೆ ಮೂರು ಲಕ್ಷ ಚಿಲ್ಲರೆ ಕೊಟ್ಟಿರುವುದಕ್ಕೆ ಕಾರಣವೇನು ?

ಶ್ರೀ ಕಡಿದಾಳ್ ಮಂಜಪ್ಪ.—ಅದೂ ಸ್ಕೇರ್‌ಸಿಟಿ ಏರಿಯಾ ; ಅಲ್ಲಿ ಕಷ್ಟ ಜಾಸ್ತಿ.

ಶ್ರೀ ಟಿ. ಎಸ್. ಮೂಡಲಗಿರಿ ಗೌಡ.—ಬಾಕಿ ಜಿಲ್ಲೆಗಳಲ್ಲಿ ಅಷ್ಟು ಕಷ್ಟವಿರಲಿಲ್ಲವೆ ?

Sri KADIDAL MANJAPPA.—It is a matter of comparison, Sir.

Sri A. BHEEMAPPA NAIK.—Have you tried to see that at least what is allotted is spent ?

Sri KADIDAL MANJAPPA.—We are trying to spend all the amount allotted.

Sri A. BHEEMAPPA NAIK.—Have you got the figures of expenditure so far made at least in Chitaldrug District ?

Sri KADIDAL MANJAPPA.—It is not readily available, Sir.

Sri A. BHEEMAPPA NAIK.—I only ask the actual amount spent so far. Can you tell me ?

Mr. SPEAKER.—The Minister has said that he has no information at present.

ಶ್ರೀ ಎ. ವಿ. ನರಸಿಂಹ ರೆಡ್ಡಿ.—ಬೆಂಗಳೂರು ಜಿಲ್ಲೆಗೆ 1953-54ನೆಯ ಸಾಲಿಗೆ ಕೊಟ್ಟಿರುವ 30 ಸಾವಿರ ರೂಪಾಯಿಗಳಲ್ಲಿ 12 ಸಾವಿರ ರೂಪಾಯಿಗಳನ್ನು ಸರ್ಕಾರ ಹಿಂತಕ್ಕೆ ತೆಗೆದುಕೊಂಡಿದೆಯಲ್ಲವೆ ?

Sri KADIDAL MANJAPPA.—The Hon'ble Member brought it to my notice and I have asked the Deputy Commissioner to re-allot if funds are available.

ಶ್ರೀ ಎ. ವಿ. ನರಸಿಂಹರೆಡ್ಡಿ.—ಅರಾಟ್ ಮಾಡಿರುವ ಮೊಬಲಗಿಗೆ ಒಟ್ ಮಾಡಿದ್ದಾರಲ್ಲವೆ ?

Sri KADIDAL MANJAPPA.—I do not know.

ಶ್ರೀ ವಿ. ಮಾಸಿಯಪ್ಪ.—ಅಭಾವ ಪ್ರದೇಶದಲ್ಲಿರುವ ಚಿತ್ರದುರ್ಗ ಕೋಲಾರ ಮತ್ತು ಶಿವಮೊಗ್ಗ ಜಿಲ್ಲೆಗಳಲ್ಲಿ ಪ್ರತಿಯೊಂದು ಬಾವಿಗೂ 500 ರೂಪಾಯಿಗಳನ್ನು ಕೊಡಬೇಕೆಂದು ಸರ್ಕಾರಿ ಆಜ್ಞೆಯಾಗಿದೆಯಲ್ಲವೆ ?

ಶ್ರೀ ಕಡಿದಾಳ್ ಮಂಜಪ್ಪ.—ಚಿತ್ರದುರ್ಗ, ಕೋಲಾರ, ತುಮಕೂರು—ಈ ಮೂರು ಜಿಲ್ಲೆಗಳಿಗೆ ಆಗಿದೆ.

ಶ್ರೀ ವಿ. ಮಾಸಿಯಪ್ಪ.—ಆ ಆಜ್ಞೆಯನ್ನು ಯಾವಾಗಿನಿಂದ ಜಾರಿಗೆ ಕೊಟ್ಟಿದೆ ?

Sri KADIDAL MANJAPPA.—I do not remember the date.

ಶ್ರೀ ವಿ. ಮಾಸಿಯಪ್ಪ.—1-4-1953ರಿಂದ ಅಲ್ಲವೇ ?

ಅಧ್ಯಕ್ಷರು.—ತಮಗೆ ಅದು ತಿಳಿದಿದ್ದ ಮೇಲೆ ಪುನಃ ಉಪಪ್ರಶ್ನೆಯನ್ನು ಏಕೆ ಹಾಕುತ್ತೀರಿ ?

ಶ್ರೀ ವಿ. ಮಾಸಿಯಪ್ಪ.—1-4-1953 ರಿಂದೀಚೆಗೆ ಈ ಬಗ್ಗೆ ಬಂದಿರತಕ್ಕ ಅರ್ಜಿಗಳಿಗೆ ಇದು ಅನ್ವಯಿಸುತ್ತದೆಯೋ ಅಥವಾ ಇಲ್ಲವೋ ಎಂಬುದನ್ನು ತಿಳಿಯಲು ನಾನು ಇದನ್ನು ಕೇಳುತ್ತಿದ್ದೇನೆ.

Sri KADIDAL MANJAPPA.—Hon'ble Member brought this to my notice only recently. I will examine the question.

ಶ್ರೀ ಎಸ್. ಸಿದ್ದಪ್ಪ.—ಬೆಂಗಳೂರು ಡಿಸ್ಟ್ರಿಕ್ಟ್‌ಗೆ ಈ ಬಾಬಿಗಾಗಿ ಒದಗಿಸಿರುವ ಹಣ ಬಹಳ ಕಡಿಮೆಯಾಗಿದ್ದು ತಾಲ್ಲೂಕಿಗೆ ನೂರು ರೂಪಾಯಿ ನಬ್ ಸಿಡಿ ಗ್ರ್ಯಾಂಟು ಕೂಡ ಬರುವುದಿಲ್ಲ, ಅಲ್ಲವೇ ?

Sri KADIDAL MANJAPPA.—I have no talukwar figures with me now.

ಶ್ರೀ ಎಸ್. ಸಿದ್ದಪ್ಪ.—ಹಾಗಾದರೆ ನಬ್‌ಸಿಡಿ ಬಗ್ಗೆ ಸಂಸ್ಥಾನಾಮಳಿ ಒದಗಿಸಿರುವ ಹಣ ಕಡಿಮೆಯೆಂಬುದನ್ನು ಸರ್ಕಾರದವರು ಗಮನಿಸಿದ್ದಾರೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಹಣ ಇರ ವಷ್ಟು ಕೊಟ್ಟಿದೆ.

ಶ್ರೀ ಎಸ್. ಸಿದ್ದಪ್ಪ.—ಈ ಬಗ್ಗೆ ಸರ್ಕಾರದವರು ಒಂದು ನಿರ್ದಿಷ್ಟ ನೀತಿಯನ್ನು ಹಾಕಿಕೊಂಡಿರುವುದನ್ನು ನಡೆಸಿಕೊಂಡು ಬರುವುದು ಅವರ ಕರ್ತವ್ಯವಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ಸಾಧ್ಯವಾದಮಟ್ಟಿಗೆ ಕೆಲಸ ನಡೆಯುತ್ತಿದೆ.

ಶ್ರೀಮತಿ ಬಳ್ಳಾರಿ ಸಿದ್ದಮ್ಮ.—ಈ ಬಗ್ಗೆ ಚಿತ್ರದುರ್ಗ ಜಿಲ್ಲೆಗೆ 50,000 ರೂಪಾಯಿ ಒದಗಿಸಿರುವುದು ಈ ವರ್ಷವೇ ಪೂರ್ತಿಯಾಗಿ ಖರ್ಚಾಗುತ್ತದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಆ ಬಗ್ಗೆ ವಿವರಗಳು ಈಗ ನನ್ನಲ್ಲಿಲ್ಲ.

ಶ್ರೀ ಎಲ್. ಸಿದ್ದಪ್ಪ.—ಶಿವಮೊಗ್ಗ ಜಿಲ್ಲೆಯ ಚೆನ್ನಗಿರಿ ತಾಲ್ಲೂಕು ಅಭಾವ ಪ್ರದೇಶವೆಂದು ಪರಿಗಣಿಸಲ್ಪಟ್ಟಿದ್ದರೂ ಅಲ್ಲಿಗೇಕೆ ಈ ಯೋಜನೆಯನ್ನು ವಿಸ್ತರಿಸಿಲ್ಲ ?

ಶ್ರೀ ಕಡಿದಾಳ್ ಮಂಜಪ್ಪ.—ಇದು ಅಖಿಲ ಭಾರತ ಯೋಜನೆ. ಅದರ ಮೇಲೆ, ಈ ಬಗ್ಗೆ ಕೇಂದ್ರ ಸರ್ಕಾರದ ಪ್ರತಿನಿಧಿಗಳೊಡನೆ ಚರ್ಚೆ ಸಹ ನಡೆಸಿದೆ. ಅವರು ನದ್ಯಕ್ಕೆ ಮೂರು ಡಿಸ್ಟ್ರಿಕ್ಟ್‌ಗಳ ಮಟ್ಟಿಗೆ ಈ ಯೋಜನೆಯನ್ನು ವಿಸ್ತರಿಸಲು ಒಪ್ಪಿಗೆಯಿತ್ತಿದ್ದಾರೆ. ಪುನಃ ಈ ವಿಚಾರದಲ್ಲಿ ಪತ್ರವ್ಯವಹಾರ ನಡೆಸುತ್ತಿದೆ.

ಶ್ರೀ ಎಲ್. ಸಿದ್ದಪ್ಪ.—ತಮಗೆ ಅವರನ್ನು ಒಪ್ಪಿಸುವಷ್ಟು ಶಕ್ತಿ ಇಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ಬೇಕಾದಷ್ಟು ಹೇಳಿದೆ.

Mr. SPEAKER.—As so many supplemantaries have been put on this matter, I have to say that out of Rs. 3,75,000 allotted in the budget only twenty-six and half thousand still remains. Government may be pleased to reconsider the whole matter and allot. It is not my function to say this; but it is only a suggestion.

Causes for the breaches of Sanganahally and Thuppadahally Tanks.

Q.—245. Sri V. MASIYAPPA (Hiriyur).—

Will the Government be pleased to state :—

(*a*) whether they have constituted a committee to investigate into the causes for the breaches of Sangenahally and Thuppadahally tanks in Chitaldrug District ;

(*b*) if they have submitted any report, whether the contents of the